ಅಧ್ಯಕ್ಷರು : ಶ್ರೀ ಪಿ.ರಾಜೀವ್ (ಸದನದಲ್ಲಿ ಹಾಜರಿರಲಿಲ್ಲ)

X) ವಿಷಯ : ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿರುವ ಕಿರ್ಲೋಸ್ಕರ್ ಎಲೆಕ್ಟ್ರಿಕಲ್ ಕಂಪನಿಯ ಆಡಳಿತ ಸಿಬ್ಬಂದಿ ಮತ್ತು ಕಾರ್ಮಿಕರ ಹಿತ ಕಾಪಾಡುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿರುವ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿಯನ್ನು lock out ಮಾಡಿದ್ದಾರೆ. ಸುಮಾರು 500 ಜನ ಬೀದಿಗೆ ಬಿದ್ದಿದ್ದಾರೆ. ನಿಮ್ಮ ಕಾರ್ಮಿಕ ಆಯುಕ್ತರು ಅವರೊಂದಿಗೆ ಮಾತುಕತೆ ಮಾಡಿದ್ದಾರೆ. ಆದರೆ, ನೀವು ನೀಡಿರುವ ಉತ್ತರದಲ್ಲಿ ಏನು ಹೇಳಿದ್ದೀರೆಂದರೆ, 2ನೇ ತಾರೀಖು employees strike ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಕೆಲಸ ಸ್ಥಗಿತ ಮಾಡಿದ್ದಾರೆ ಎಂದು ಹೇಳಿದ್ದೀರಿ. ಆದರೆ, ಕಾರ್ಮಿಕರ್ಯಾರು ಕೆಲಸ ಸ್ಥಗಿತ ಮಾಡಿರಲಿಲ್ಲ. ಇವರೇ lock out ಮಾಡಿದ್ದಾರೆ. ಕಾನೂನು ಪ್ರಕಾರ ನೋಟೀಸ್ ಕೊಡಬೇಕು. ಅದನ್ನು ಸಹ ಕೊಟ್ಟಿಲ್ಲ. ಹೀಗಾಗಿ ಅಲ್ಲಿದ್ದಂಥ ನೌಕರರಿಗೆ ಹಾಗೂ ಸಿಬ್ಬಂದಿಗಳಿಗೆ ಬಹಳಷ್ಟು ತೊಂದರೆಯಾಗಿದೆ. ಸುಮಾರು 500 ಜನ ಬೀದಿಗೆ ಬಿದ್ದಿದ್ದಾರೆ. ಆದಷ್ಟು ಬೇಗ ಮಾತುಕತೆ ಮಾಡಿ ಅವರ ವೇತನ ಪರಿಷ್ಕರಣೆ ಮಾಡಬೇಕೆಂದು ಕೇಳುತ್ತಿದ್ದಾರೆ. ನಿಮ್ಮ labour departmentನ ಆಯುಕ್ತರು ಕಂಪನಿಯ management ಪರವಾಗಿ ಇದ್ದಾರೆ. ಆ ರೀತಿ ಮಾಡ ಬಾರದು. ಇಲಾಖೆಯವರು ನೌಕರರ ಪರವಾಗಿ ಇರುವಂತಿರಬೇಕು. ಆದರೆ, ನಿಮ್ಮ ಉತ್ತರ ನೋಡಿದರೆ ಅವರು management ಪರವಾಗಿ ಇದ್ದಾರೆಂದು ಅನ್ನಿಸುತ್ತದೆ. 2ನೇ ತಾರೀಖು ಕೆಲಸವನ್ನು ಸ್ಥಗಿತಗೊಳಿಸಿದರು ಎಂದು ಉತ್ತರ ಕೊಟ್ಟಿದ್ದೀರಿ. ಅವರು ಕೆಲಸ ಸ್ಥಗಿತಗೊಳಿಸಲೇ ಇಲ್ಲ. ಈಗ ಕಂಪನಿಯವರು ಕಾರ್ಖಾನೆಯನ್ನು ಬಂದ್ ಮಾಡಿದ ಮೇಲೆ strike ಕುಳಿತಿದ್ದಾರೆ.

ಅಧ್ಯಕ್ಷರು : ರಾಜಿ ಮಾಡುವುದಕ್ಕೆ, cancillation ಮಾಡುವುದಕ್ಕೆ ಅವಕಾಶವಿದ್ದರೆ ಮಾಡಿ.

ವಿಷಯ : ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿರುವ ಕಿಲೋರ್ಸ್ಕರ್ ಎಲೆಕ್ಟ್ರಿಕಲ್ ಕಂಪನಿಗೆ ರಾತ್ರೋರಾತ್ರಿ ಬೀಗ ಹಾಕಲಾಗಿದೆ. ಕಂಪನಿಯ ಆಡಳಿತ ಮಂಡಳಿಯವರ ಈ ಕ್ರಮದಿಂದಾಗಿ ಕಂಪನಿಯ 500 ಆಡಳಿತ ಸಿಬ್ಬಂದಿ ಮತ್ತು 150 ಜನ ಕಾರ್ಮಿಕರು ಅತಂತ್ರ ಸ್ಥಿತಿಯಲ್ಲಿದ್ದಾರೆ. ಯಾವುದೇ ನೋಟೀಸ್ ನೀಡದೇ ಏಕಾಏಕಿ ಕಂಪನಿಗೆ ಬೀಗ ಹಾಕಿರುವುದರ ವಿರುದ್ಧ ಸಿಬ್ಬಂದಿ ಮತ್ತ ಕಾರ್ಮಿಕರು ಮಂಗಳವಾರ ಪ್ರತಿಭಟನೆ ನಡೆಸಿದ್ದು, ಪರಿಸ್ಥಿತಿ ಕೈಮೀರುವ ಸಾಧ್ಯತೆ ಇದೆ. ವೇತನ ಪರಿಷ್ಕರಣೆ ವಿಷಯವಾಗಿ ನೌಕರರು ಹಾಗೂ ಆಡಳಿತ ಮಂಡಳಿ ಮಧ್ಯೆ ಈ ಹಿಂದೆ ವಿವಾದ ಇದ್ದಾಗ ಹೊಂದಾಣಿಕೆ ನಡೆದಿತ್ತು. ಈಗ ಇದೇ ವಿಷಯದಲ್ಲಿ ತಿಕ್ಕಾಟ ಜೋರಾಗಿ ಈ ಹಂತ ತಲುಪಿದೆ. ಸರ್ಕಾರ ತಕ್ಷಣ ಮಧ್ಯೆ ಪ್ರವೇಶಿಸಿ ಕಂಪನಿಯ 250 ಆಡಳಿತ ಸಿಬ್ಬಂದಿ ಮತ್ತು 150 ಜನ ಕಾರ್ಮಿಕರ ಹಿತ ಕಾಪಾಡಲು ಕ್ರಮ ಕೈಗೊಳ್ಳುವ ಕುರಿತು.

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ : ಮಾನ್ಯ ಅಧ್ಯಕ್ಷರೆ, ಮೆ: ಕಿಲೋರ್ಸ್ಕರ್ ಕಾರ್ಖಾನೆಯಲ್ಲಿ 250 ಖಾಯಂ ಕಾರ್ಮಿಕರು, 70 ಗುತ್ತಿಗೆ ಕಾರ್ಮಿಕರು ಮತ್ತು 70 ಸಿಬ್ಬಂದಿವರ್ಗದವರು ಕೆಲಸ ನಿರ್ವಹಿಸುತ್ತಿದ್ದಾರೆ. ಸದರಿ ಸಂಸ್ಥೆಯ ಕಾರ್ಮಿಕರ ಪರವಾಗಿ ಕಿಲೋರ್ಸ್ಕರ್ ಎಲೆಕ್ಟ್ರಿಕ್ ಕಂಪನಿ ನೌಕರರ ಸಂಘ, ಹುಬ್ಬಳ್ಳಿ ಇವರು ದಿನಾಂಕ 30-11-2011 ರಂದು ವೇತನ ಹೆಚ್ಚಳ ಮತ್ತು ಇತರೆ ಬೇಡಿಕೆ ಕುರಿತು ಆಡಳಿತವರ್ಗದ ಮುಂದೆ ಮನವಿಯನ್ನು ಸಲ್ಲಿಸಿದ್ದರು.

ಕಾರ್ಮಿಕರ ಬೇಡಿಕೆ ಕುರಿತು ಆಡಳಿತವರ್ಗ ಮತ್ತು ಸಂಘದ ಪದಾಧಿಕಾರಿಗಳ ಮಧ್ಯೆ ಹಲವಾರು ಸುತ್ತಿನ ದ್ವಿಪಕ್ಷೀಯ ಮಾತುಕತೆ ನಡೆಸಲಾಗಿರುತ್ತದೆ. ದ್ವಿಪಕ್ಷೀಯ ಮಾತುಕತೆಗಳು ಫಲಪ್ರದವಾಗದ ಕಾರಣ, ದಿನಾಂಕ 30-06-2014 ರಂದು ಆಡಳಿತವರ್ಗ ಸಹಾಯಕ ಕಾರ್ಮಿಕ ಆಯುಕ್ತರು, ಹುಬ್ಬಳ್ಳಿ ವಿಭಾಗ, ಹುಬ್ಬಳ್ಳಿ ಇವರು ಮಧ್ಯೆ ಪ್ರವೇಶಿಸಲು ಕೋರಿಕೆ ಪತ್ರವನ್ನು ಸಲ್ಲಿಸಿದ್ದರು. ಸಹಾಯಕ ಕಾರ್ಮಿಕ ಆಯುಕ್ತರು, ಹುಬ್ಬಳ್ಳಿ ಇವರು ದಿನಾಂಕ 03-07-2014 ರಂದು ಪ್ರಥಮ ಸಂಧಾನ ಸಭೆಯನ್ನು ಪ್ರಾರಂಭಿಸಿರುತ್ತಾರೆ.

ಈ ಮಧ್ಯೆ ಕಾರ್ಮಿಕರು ದಿನಾಂಕ 02–07–2014 ರಿಂದ ಕೆಲಸವನ್ನು ಸ್ಥಗಿತಗೊಳಿಸಿ ಕಾರ್ಖಾನೆ ಆವರಣದಲ್ಲಿ ಮುಷ್ಕರವನ್ನು ಪ್ರಾರಂಭಿಸಿರುತ್ತಾರೆ.

ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಸಂಸ್ಥೆಯ ಆವರಣದಲ್ಲಿ ಮುಷ್ಕರ ನಡೆಸುತ್ತಿದ್ದುದ್ದರಿಂದ, ಆಡಳಿತವರ್ಗ ದಿನಾಂಕ 08–07–2014 ರಿಂದ ತಾತ್ಕಾಲಿಕವಾಗಿ ಉತ್ಪಾದನೆಯನ್ನು ಸ್ಥಗಿತಗೊಳಿಸಿ ಕಾರ್ಖಾನೆಗೆ ಬೀಗಮುದ್ರೆ ವಿಧಿಸಿರುತ್ತಾರೆ. ಪುನಃ ದಿನಾಂಕ 09–07–2014 ರಂದು ಸಭೆಯನ್ನು ಸಹಾಯಕ ಕಾರ್ಮಿಕ ಆಯುಕ್ತರು, ಹುಬ್ಬಳ್ಳಿ ಇವರು ಕರೆದಿದ್ದು, ಸಂಧಾನ ಮುಂದುವರೆಯುತ್ತಿದೆ.

ಶ್ರೀ ಪಿ.ಟಿ.ಪರಮೇಶ್ವರ್ ನಾಯ್ಕ್ : ಮಾನ್ಯ ಅಧ್ಯಕ್ಷರೆ, ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘಟನೆಗಳವರಿಗೆ ಒಂದು ದಿನ ಕಾಲಾವಕಾಶ ಕೇಳಿರುವುದರಿಂದ ನಾಳೆಗೆ ಆ ಸಂಧಾನ ಸಭೆ ಇದೆ. ಖಂಡಿತವಾಗಿಯೂ ಸಭೆಯನ್ನು ಯಶಸ್ವಿಗೊಳಿಸಿ ಅಲ್ಲಿನ ಕಾರ್ಮಿಕರು ಕೆಲಸವನ್ನು ಮುಂದುವರೆಸುವುದಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತದೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಕಾರ್ಮಿಕ ಇಲಾಖೆಯ ಆಯುಕ್ತರು ಕಂಪನಿಯ ಕಾರ್ಮಿಕರ ಪರವಾಗಿ ಇರುವಂತೆ ಹೇಳಿ.

ಶ್ರೀ ಪಿ.ಟಿ.ಪರಮೇಶ್ವರ್ ನಾಯ್ಕ್ : ಖಂಡಿತವಾಗಿಯೂ ಕಾರ್ಮಿಕರ ಪರವಾಗಿ ಇರುವಂತೆ ಕ್ರಮ ಕೈಗೊಳ್ಳುತ್ತೇನೆ.

XI) ವಸತಿ ಯೋಜನೆ ಹಕ್ಕುಪತ್ರದಲ್ಲಿ ಪತ್ನಿಯ ಹೆಸರನ್ನು ನಮೂದಿಸುವ ಬಗ್ಗೆ

ಶ್ರೀ ಚಲುವರಾಯಸ್ವಾಮಿ(ನಾಗಮಂಗಲ) : ಮಾನ್ಯ ಅಧ್ಯಕ್ಷರೆ, ನನ್ನ ವಿಧಾನಸಭಾ ಕ್ಷೇತ್ರ ಕೊಪ್ಪ ಹೋಬಳಿಯಲ್ಲಿ ಚಿಕ್ಕದೊಡ್ಡಿ ಗ್ರಾಮದಲ್ಲಿ ತಿಮ್ಮೇಗೌಡ ಎನ್ನುವವರಿಗೆ 45–30 ಅಡಿಗಳ ಸೈಟ್ ಕೊಟ್ಟಿದ್ದಾರೆ. ಅವರು ಆಶ್ರಯ ಮನೆ ಯೋಜನೆಯಡಿಯಲ್ಲಿ ಅವರ ಹೆಂಡತಿಗೆ ಖಾತೆ ಬದಲಾವಣೆ ಮಾಡಿ sanction ಆಗಿದೆ. 5 ವರ್ಷ ಮನೆ ಕಟ್ಟುವುದಕ್ಕೆ ಅವಕಾಶವಿದೆ. ತಿಮ್ಮೇ